# ಬದಲಾಗುತ್ತಿರುವ ಮನೋಸ್ವರೂಪ



■ ಡಾ.ಎ. ಶ್ರೀಧರ

ಹದಿಹರೆಯದ ಸ್ಥಿತಿಯಲ್ಲಿ ಪಕ್ವತೆ, ಪರಾಮರ್ಶೆಯ ಬಲ ಕ್ಷೀಣವಾಗಿರುವುದೆಂಬ ಭಾವನೆ ಪೋಷಕರಲ್ಲಿ ಪ್ರಬಲವಾಗಿಯೇ ಇರುತ್ತದೆ. ಹದಿಹರೆಯದವರು ತಮ್ಮ ಲೈಂಗಿಕ ಭಾವ, ಬಯಕೆಗಳನ್ನು ವ್ಯಕ್ತಪಡಿಸುವುದು, ತೃಪ್ತಿಪಡಿಸಿಕೊಳ್ಳುವ ಮಾರ್ಗಗಳೆಲ್ಲವೂ ಅನೈತಿಕ, ಅಪಾಯಕಾರಿ, ಸಮಾಜವಿರೋಧಿ ಎನ್ನುವಂತಹ ಅಭಿಪ್ರಾಯ. ಇದಕ್ಕೆ ಕಡಿವಾಣ, ನಿಯಂತ್ರಣ ಬೇಕೇ ಬೇಕೆನ್ನುವ ಛಲ. ಪ್ರಕೃತಿದತ್ತವಾಗಿ ಹದಿನಾರರ ವಯಸ್ಸು ಎಡವಟ್ಟಿನ ವಯಸ್ಸಾಗಿರುವುದರಿಂದ ಸ್ವತಂತ್ರವಾಗಿ ಆಲೋಚಿಸುವ ಅಥವಾ ಸೂಕ್ತ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಇರದು. ಹೀಗಾಗಿ ಇವುಗಳನ್ನು ಕಾನೂನಾತ್ಮಕವಾಗಿಯೇ ತಡೆಗಟ್ಟುವುದು ಒಳಿತು ಎನ್ನುವ ವಾದವಿಂದು ಮುನ್ನೆಲೆಗೆ ಬಂದಿದೆ.

ತಂತ್ರಜ್ಞಾನದ ಹೊಸತನಗಳು ಹದಿಹರೆಯ ಉತ್ಸಾಹ, ಉನ್ಮಾದಗಳನ್ನೂ ಹೆಚ್ಚಿಸುತ್ತಿವೆ. ಶಾರೀರಿಕ ಬೆಳವಣಿಗೆಯನ್ನು ಮೀರಿಸಿರುವ ಮಾನಸಿಕ ವಿಕಾಸವು ಇಂದಿನ ಹದಿಹರೆಯದ ಸಹಜ ಲಕ್ಷಣ. ಆಧುನಿಕ ತಂತ್ರಜ್ಞಾನದ ಸಲಕರಣೆ ಮತ್ತು ಮಾಧ್ಯಮಗಳು ಇದಕ್ಕೆ ಮುಖ್ಯ ಕಾರಣ. ಅತಿ ಸಣ್ಣ ವಯಸ್ಸಿನಿಂದಲೇ ಮೊಬೈಲ್ ಫೋನ್. ಕಂಪ್ಯೂಟರ್ ಅಂತರ್ಜಾಲದ ಆವರಣ, ಆವಿಷ್ಕಾರಗಳೊಂದಿಗೆ ಬೆಳೆಯುತ್ತಿರುವ ಹದಿಹರೆಯದ ಮನಸುಗಳ ಮಾನಸಿಕ ಪಕ್ವತೆಯ ಮಟ್ಟವನ್ನು ಏರಿಸಿವೆ. ವಯಸ್ಸಿಗೆ ಅನುಗುಣವಾದ ತಿಳಿವಳಿಕೆ ಎನ್ನುವ ಮಾತಿಗಿಂದು ಬೇಕಿದೆ ಹೊಸದೊಂದು ವ್ಯಾಖ್ಯಾನ. ಇಂದಿನ ಮಕ್ಕಳಲ್ಲಿ ಹುಟ್ಟಿನೊಂದಿಗೆ ಸಿಗುತ್ತಿರುವ ದೇಹ ಬೆಳವಣಿಗೆಗೆ ಬೇಕಾದ ಪೌಷ್ಟಿಕತೆ, ರೋಗ ನಿಯಂತ್ರಿಸುವ ಲಸಿಕೆಗಳು ಮಕ್ಕಳ ಮನೋಬಲ ಚುರುಕುಗೊಳ್ಳುವುದಕ್ಕೂ ಕಾರಣ. ಈ ಹೊಸ ಬೆಳವಣಿಗೆಗಳು ಪಾಲನೆ, ಪೋಷಣೆ ಮಾಡುವ ಪೋಷಕರಿಗಂತೂ ದೊಡ್ಡ ಸವಾಲೇ. ಅದರಲ್ಲಿಯೂ ಲೈಂಗಿಕ ಬೆಳವಣಿಗೆ, ಪಕ್ವತೆಗಳಿಗೆ ಸಂಬಂಧಿಸಿದಂತೆ ಹದಿನಾರು ದಾಟಿದ ಕಿಶೋರಾವಸ್ಥೆಯ ದೇಹ, ಮನಸ್ಸು ಮತ್ತು ಸಹವಾಸದಿಂದ ಮೂಡಿಬರುವ ಒತ್ತಡಗಳು ಸ್ವೇಚ್ಛಾಚಾರ, ಅವಾಂತರಗಳಿಗೆ ಕಾರಣವೆನ್ನುವುದರ ಬಗ್ಗೆ ಚರ್ಚೆ, ವಿವಾದಗಳು ತಲೆಎತ್ತಿವೆ.

ಈ ಹಿನ್ನೆಲೆಯಲ್ಲಿ ಹದಿನಾರರ ಆರಂಭದೊಂದಿಗೆ ಉಂಟಾಗುವ ಮಾನಸಿಕ ವಿಕಾಸದ ಪ್ರಕ್ರಿಯೆಗಳು ವಿಧಿಯನ್ನು ವಿಕಾಸಾತ್ಮಕ ಮನೋವೈಜ್ಞಾನಿಕ ಅಧ್ಯಯನಗಳು ತಿಳಿಯಪಡಿಸಿವೆ. ಈ ಮೂಲಕ ಹುಟ್ಟಿದ ನಂತರದ ಬೆಳವಣಿಗೆ, ವಯಸ್ಸಿಗೆ ಅನುಗುಣವಾದ ಹೊಸ ಮಾನಸಿಕ ಶಕ್ತಿಗಳು ಬೆಳವಣಿಗೆ, ಪಕ್ವತೆಯ ಕ್ರಮಗಳನ್ನು ತಿಳಿದುಕೊಳ್ಳುವುದು ಇಂದು ಕಷ್ಟವಲ್ಲ.

ಪ್ರಕೃತಿದತ್ತವಾಗಿ ಹದಿನಾರರ ವಯಸ್ಸು ಎಡವಟ್ಟಿನ ವಯಸ್ಸು. ಸ್ವತಂತ್ರವಾಗಿ ಆಲೋಚಿಸುವ, ಜವಾಬ್ದಾರಿಯುತ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಇರದು ಎನ್ನುವ ಭಾವನೆಗಳು ಸರ್ವೇಸಾಮಾನ್ಯ. ಹೀಗಾಗಿ ಇವುಗಳನ್ನು ಕಾನೂನಾತ್ಮಕವಾಗಿಯೇ ತಡೆಗಟ್ಟುವುದು ಒಳಿತು ಎನ್ನುವ ವಾದವಿಂದು ಮುನ್ನೆಲೆಗೆ ಬಂದಿದೆ.

ಭಾಷೆ, ಭಾವಗಳ ಮೂಲಕ ಮಗುವು ಸಾಮಾಜಿಕ ಸಂಪರ್ಕದ ಮಹತ್ವವನ್ನು ತಿಳಿಯುವುದರೊಂದಿಗೆ ತನ್ನತನದ ಮಾನಸಿಕತೆಯನ್ನು ಬಲಪಡಿಸಿಕೊಳ್ಳುತ್ತಾ ಮುಂದುವರೆಯುತ್ತದೆ. ಒಡನಾಡಿತನ, ಗೆಳೆತನ, ಪ್ರೀತಿ, ವಾತ್ಸಲ್ಯ, ಅನುಕಂಪದಂತಹ ವಿಶಿಷ್ಟ ಮನೋಗುಣಗಳನ್ನು ಗಟ್ಟಿಯಾಗಿಸಿಕೊಳ್ಳುವುದು ಇವುಗಳೊಂದಿಗಿನ ಒಂದು ಮಾನಸಿಕ ಪ್ರಕ್ರಿಯೆ.

ಈ ಸಮಯದಲ್ಲಿಯೇ ಮೂಡುವ ಮಹತ್ವದ ಮಾನಸಿಕ ಸ್ವರೂಪವೆಂದರೆ ವ್ಯಕ್ತಿತ್ವ. ಈ ಬೆಳವಣಿಗೆಯ ಹಿನ್ನೆಲೆಯಲ್ಲಿ ವೈಯಕ್ತಿಕ ಸ್ವಾಯತ್ತತೆ, (ಪರ್ಸನಲ್ ಅಟೋನಾಮಿ) ಎನ್ನುವಂತಹ ಬಲವಾದ ಅರಿವು ಜಾಗೃತಗೊಳ್ಳುತ್ತದೆ. ತನ್ನತನವೆಂಬುದಕ್ಕೆ ಆಕಾರ ಮತ್ತು ನಿಯಮಗಳನ್ನು ರೂಢಿಸಿಕೊಳ್ಳುವ ಕ್ರಮವೇ ಇದರಲ್ಲಿರುವ ವಿಶೇಷ ಶಕ್ತಿ. ತನ್ನ ನಿಲುವು, ನಿರ್ಧಾರಗಳು ಸ್ವತಂತ್ರವಾಗಿ ಜವಾಬ್ದಾರಿಯುತವಾಗಿ ತೆಗೆದುಕೊಂಡಂತಹವುಗಳಾಗಿದ್ದು ಅವುಗಳ ಪರಿಣಾಮಗಳನ್ನು ಎದುರಿಸುವ ಬಲವಿದೆ ಎನ್ನುವ ಭಾವ ಇದಾಗಿರುತ್ತದೆ. ಈ ಬೆಳವಣಿಗೆಯೇ ಪೋಷಕರು, ಶಿಕ್ಷಕರ ಮನಸಿಗೆ ಆತಂಕಕಾರಿ ಸಂಗತಿ. ಅದರಲ್ಲಿಯೂ ಲೈಂಗಿಕ ವಿಷಯಗಳಿಗೆ ಅನ್ವಯಿಸಿದಂತೆ ಈ ಸ್ಥಿತಿಯಲ್ಲಿ ಪಕ್ವತೆ, ಪರಾಮರ್ಶೆಯ ಬಲ ಕ್ಷೀಣವಾಗಿರುವುದೆಂಬ ಭಾವನೆ ಪೋಷಕರಲ್ಲಿ ಪ್ರಬಲವಾಗಿಯೇ ಇರುತ್ತದೆ.

ಹದಿಹರೆಯದವರು ತಮ್ಮ ಲೈಂಗಿಕ ಭಾವ, ಬಯಕೆಗಳನ್ನು ವ್ಯಕ್ತಪಡಿಸುವುದು, ತೃಪ್ತಿಪಡಿಸಿಕೊಳ್ಳುವ ಮಾರ್ಗಗಳೆಲ್ಲವೂ ಅನೈತಿಕ, ಅಪಾಯಕಾರಿ ಸಮಾಜವಿರೋಧಿ ಎನ್ನುವಂತಹ ಅಭಿಪ್ರಾಯ. ಇದಕ್ಕೆ ಕಡಿವಾಣ, ನಿಯಂತ್ರಣ ಬೇಕೇ ಬೇಕೆನ್ನುವ ಛಲ. ಪ್ರಕೃತಿದತ್ತವಾಗಿ ಹದಿನಾರರ ವಯಸ್ಸು ಎಡವಟ್ಟಿನ ವಯಸ್ಸಾಗಿರುವುದರಿಂದ ಸ್ವತಂತ್ರವಾಗಿ ಆಲೋಚಿಸುವ ಅಥವಾ ಸೂಕ್ತ, ಜವಾಬ್ದಾರಿಯುತ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಇರದು ಎನ್ನುವ ಭಾವನೆಗಳು ಸರ್ವೇಸಾಮಾನ್ಯ. ಹೀಗಾಗಿ ಇವುಗಳನ್ನು ಕಾನೂನಾತ್ಮಕವಾಗಿಯೇ ತಡೆಗಟ್ಟುವುದು ಒಳಿತು ಎನ್ನುವ ವಾದವಿಂದು ಮುನ್ನೆಲೆಗೆ ಬಂದಿದೆ.